ಬೆಳೆ ಸ್ವಚ್ಛತೆ, ವರ್ಗೀಕರಣ ಮತ್ತು ಗುಣವಿಶ್ಲೇಷಣ ಮಾಡುವುದರಿಂದ ಏಕೀಕೃತ ಮಾರುಕಟ್ಟೆಯಲ್ಲಾಗುವ ಲಾಭಗಳು

ಆರ್-ಮನೋಜ್
ಬೆಂಗಳೂರು

ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ರೈತರ ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಪಡೆಯಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಸಚಿತ್ರವಾಗಿ ವಿವರಿಸುವುದು ಈ ಲೇಖನದ ಉದ್ದೇಶ. ರಾಮಣ್ಣ ಮತ್ತು ಶಾಮಣ್ಣ ಇಬ್ಬರು ರೈತರು ಬೆಳೆ ಕೊಯ್ಲಿನಿಂದ ಹಿಡಿದು ಮಾರುಕಟ್ಟೆಯಲ್ಲಿ ಮಾರಾಟ ಪ್ರಕ್ರಿಯೆಗಳಲ್ಲಿ ಭಾಗವಹಿಸುವ ಕಾರ್ಯ ವಿಧಾನಗಳ ಬಗ್ಗೆ ಸಚಿತ್ರ ವಿವರಣೆ ಗಮನಿಸಬಹುದು.



ರಾಮಣ್ಣ ಸಕಾಲದಲ್ಲಿ ಬೆಳೆಯನ್ನು ಕೊಯ್ಲು ಮಾಡಿ, ಒಣಗಿಸಿ, ಸ್ವಚ್ಛ ಮಾಡಿ, ಗುಣ ಪ್ರಮಾಣಕ್ಕೆ ಅನುಗುಣವಾಗಿ ವಿಂಗಡಿಸಿ, ಉತ್ಪನ್ನ ಮಾರಾಟಕ್ಕಾಗಿ ಪ್ಯಾಕಿಂಗ್ ಮಾಡುತ್ತಿರುವುದು.

ಶಾಮಣ್ಣ ಸಕಾಲದಲ್ಲಿ ಬೆಳೆಯನ್ನು ಕೊಯ್ಲು ಮಾಡದೆ, ಬೆಳೆಯನ್ನು ಸರಿಯಾಗಿ ಒಣಗಿಸದೆ, ಸ್ವಚ್ಛ ಮಾಡದೆ, ಗುಣ ಪ್ರಮಾಣಕ್ಕೆ ಅನುಗುಣವಾಗಿ ವಿಂಗಡಿಸದೆ ಉತ್ಪನ್ನ ಮಾರಾಟಕ್ಕಾಗಿ ಪ್ಯಾಕ್ ಮಾಡಿದರು.

ರಾಮಣ್ಣ ಬೆಳೆಯನ್ನು ಸ್ವಚ್ಛ ಮಾಡಿ, ವರ್ಗೀಕರಿಸಿ, ಗುಣ ವಿಶ್ಲೇಷಣೆ ಮಾಡಿಸಿದ್ದರಿಂದ ಆದ ಲಾಭದ ಬಗ್ಗೆ ಮುಂದಿನ ಚಿತ್ರಗಳಲ್ಲಿ ವಿವರವಾದ ಮಾಹಿತಿ ನೋಡಬಹುದು.

ಶಾಮಣ್ಣ ಬೆಳೆ ಸ್ವಚ್ಛ ಮಾಡದೆ - ವರ್ಗೀಕರಿಸದೆ - ಗುಣ ವಿಶ್ಲೇಷಣೆ ಮಾಡಿಸದೆ ನೇರವಾಗಿ ಮಾರಾಟಕ್ಕೆ ಪ್ಯಾಕ್ ಮಾಡಿದ್ದರಿಂದ ಆದ ನಷ್ಟದ ಬಗ್ಗೆ ಮುಂದಿನ ಚಿತ್ರದಲ್ಲಿ ಗಮನಿಸಬಹುದು.

ಶಾಮಣ್ಣ ಮತ್ತು ರಾಮಣ್ಣ ತಮ್ಮ ತಮ್ಮ ಉತ್ಪನ್ನವನ್ನು ಮಾರುಕಟ್ಟೆಗೆ ಮಾರಾಟಕ್ಕೆ ಕೊಂಡೊಯ್ಯಲು ಸಿದ್ಧ ಪಡಿಸಿರುವುದು.



ರಾಮಣ್ಣ ಮತ್ತು ಶಾಮಣ್ಣ ಉತ್ಪನ್ನಗಳೊಂದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಆಗಮಿಸಿ ಮಾರುಕಟ್ಟೆ ಮುಖ್ಯದ್ವಾರದಲ್ಲಿ ಗೇಟ್ ಎಂಟ್ರಿ ಮಾಡಿಸಿದರು. ರಾಮಣ್ಣ ಅವರ ಉತ್ಪನ್ನಕ್ಕೆ ಲಾಟ್ ನಂಬರ-1 ಮತ್ತು ಶಾಮಣ್ಣ ಅವರ ಉತ್ಪನ್ನಕ್ಕೆ ಲಾಟ್ ನಂಬರ-2 ಎಂಬ ಯುನಿಕ್ (ವಿಶೇಷ) ಲಾಟ್ ಸಂಖ್ಯೆಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ನೀಡುತ್ತಿರುವುದು.

ಮಾರುಕಟ್ಟೆ ಪ್ರಾಂಗಣದಲ್ಲಿ ಮಾರಾಟಕ್ಕೆ ಸಿದ್ಧಪಡಿಸಿದ ಉತ್ಪನ್ನವನ್ನು ಗುಣವಿಶ್ಲೇಷಣೆ ಮಾಡಿಸಲು ರಾಮಣ್ಣ ಒಪ್ಪಿ ಸೂಚಿಸುತ್ತಿರುವುದು.



ಏಕೀಕೃತ ಮಾರುಕಟ್ಟೆಯಲ್ಲಿನ ಪ್ರಯೋಗಾಲಯ ತಜ್ಞರಿಗೆ ಶಾಮಣ್ಣ ತನ್ನ ಉತ್ಪನ್ನವನ್ನು ಗುಣವಿಶ್ಲೇಷಣೆ ಮಾಡುವುದು ಬೇಡ ಎಂದು ನಿರಾಕರಿಸುತ್ತಿರುವುದು.

ಗುಣ ವಿಶ್ಲೇಷಣೆ ಪ್ರಯೋಗಾಲಯ

ರಾಮಣ್ಣ ಅವರ ಉತ್ಪನ್ನದ ಗುಣ ವಿಶ್ಲೇಷಣೆ ದತ್ತಾಂಶದ ವಿವರಗಳನ್ನು ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿನ ಆನ್‌ಲೈನ್‌ನಲ್ಲಿ ನಮೂದಿಸುತ್ತಿರುವ ಅಧಿಕಾರಿಗಳು.





ರಾಮಣ್ಣ ಅವರ ಲಾಟ್ ನಂಬರ-1 ಉತ್ಪನ್ನ ಮತ್ತು ಶಾಮಣ್ಣ ಅವರ ಲಾಟ್ ನಂಬರ-2 ಉತ್ಪನ್ನವನ್ನು ಸ್ಥಳೀಯ ಖರೀದಿದಾರರು ಪರೀಕ್ಷಿಸುತ್ತಿರುವ ದೃಶ್ಯವನ್ನು ನೋಡಬಹುದು. ಲಾಟ್ ನಂಬರ-1ರಲ್ಲಿ ಉತ್ಪನ್ನ ಗುಣ ವಿಶ್ಲೇಷಣೆ ಮಾಡಿದ ಮಾಹಿತಿ ಲಭ್ಯವಿದೆ. ಲಾಟ್ ನಂಬರ - 2ರಲ್ಲಿ ಗುಣವಿಶ್ಲೇಷಣೆ ಮಾಡಿದ ವಿವರಗಳು ಇಲ್ಲದಿರುವುದು ಕಾಣಬಹುದು.

ಆನ್‌ಲೈನ್ ಟೆಂಡರ್ ಪ್ರಕ್ರಿಯೆಯಲ್ಲಿ ಸ್ಥಳೀಯ, ರಾಜ್ಯದ ಹೊರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಹೊರ ರಾಜ್ಯಗಳಿಂದ ಏಕೀಕೃತ ಲೈಸೆನ್ಸ್ ಪಡೆದ ಖರೀದಿದಾರರು ಭಾಗವಹಿಸುವ ಮಾದರಿಯನ್ನು ಚಿತ್ರದಲ್ಲಿ ನೋಡಬಹುದು.



ಸ್ಪರ್ಧಾತ್ಮಕ ಬೆಲೆ ಪಡೆದ ರಾಮಣ್ಣನ ಹರ್ಷ

ಆನ್‌ಲೈನ್ ಬಿಡ್ಡಿಂಗ್‌ನಲ್ಲಿ ರಾಮಣ್ಣ ಅವರ ಲಾಟ್ ನಂ.1ಕ್ಕೆ ಹೆಚ್ಚು ಖರೀದಿದಾರರು ಬಿಡ್ ಮಾಡಿರುತ್ತಾರೆ. ಕಾರಣ ರಾಮಣ್ಣ ತನ್ನ ಉತ್ಪನ್ನವನ್ನು ಗುಣ ವಿಶ್ಲೇಷಣೆ ಮಾಡಿಸಿ, ಅದರ ವಿವರವನ್ನು ಆನ್‌ಲೈನ್‌ನಲ್ಲಿ ಪ್ರಸಾರ ಮಾಡಿಸಿದ್ದರಿಂದ ಸ್ಥಳೀಯ ಖರೀದಿದಾರರಲ್ಲದೆ ರಾಜ್ಯದ ಹೊರ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ವ್ಯವಹರಿಸುವ ಖರೀದಿದಾರರು ಮತ್ತು ಹೊರ ರಾಜ್ಯಗಳ ಖರೀದಿದಾರರು ಇ-ಟೆಂಡರ್‌ನಲ್ಲಿ ಭಾಗವಹಿಸಿದ್ದರಿಂದ ಖರೀದಿಯಲ್ಲಿ ಸ್ಪರ್ಧೆ ಹೆಚ್ಚಾಗಿದ್ದರಿಂದ ಉತ್ತಮ ಸ್ಪರ್ಧಾತ್ಮಕ ಬೆಲೆ ಲಭ್ಯವಾಗಿದೆ ಎಂದು ಹೇಳುತ್ತಾ ರಾಮಣ್ಣ ಹರ್ಷ ವ್ಯಕ್ತ ಪಡಿಸುತ್ತಿರುವುದನ್ನು ಚಿತ್ರದಲ್ಲಿ ಗಮನಿಸಬಹುದು, ಆದೇ ರೀತಿ ಶಾಮಣ್ಣ ತನ್ನ ಉತ್ಪನ್ನವನ್ನು ಗುಣ ವಿಶ್ಲೇಷಣೆ ಮಾಡಿಸದೇ ಬೆಳೆಯನ್ನು ಮಾರಾಟ ಮಾಡಲು ಸಿದ್ಧರಾದ್ದರಿಂದ ಇ-ಟೆಂಡರ್‌ನಲ್ಲಿ ಕೇವಲ ಸ್ಥಳೀಯ ಖರೀದಿದಾರರು ಬಿಡ್ಡಿಂಗ್ ಮಾಡಿರುತ್ತಾರೆ. ಆದ್ದರಿಂದ ಶಾಮಣ್ಣರ ಬೆಳೆಗೆ ಬೆಲೆ ಪಡೆಯಲು ಸಾಧ್ಯವಾಗಲಿಲ್ಲ. ಆಗ ಶಾಮಣ್ಣರಿಗೆ ತಮ್ಮ ತಪ್ಪಿನ ಬಗ್ಗೆ ಅರಿವಾಗಿ ಪಶ್ಚಾತ್ತಾಪ ಪಡುತ್ತಿರುವುದು ಸಹ ಚಿತ್ರದಲ್ಲಿ ಕಾಣಬಹುದು.

ರೈತ ಮಿತ್ರರಿಗೆ ಮಾರ್ಗದರ್ಶನ

ಬೆಳೆಯನ್ನು ಸಕಾಲದಲ್ಲಿ ಕೊಯ್ಲು ಮಾಡಿ, ಸರಿಯಾಗಿ ಒಣಗಿಸಿ, ಸ್ವಚ್ಛ ಮಾಡಿ, ವರ್ಗೀಕರಿಸಿ, ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಗುಣ ವಿಶ್ಲೇಷಣೆ ಮಾಡಿಸಿದರೆ, ಖರೀದಿಯಲ್ಲಿ ಸ್ಪರ್ಧೆ ಹೆಚ್ಚಾಗಿ ಉತ್ಪನ್ನಕ್ಕೆ ಸ್ಪರ್ಧಾತ್ಮಕ ಬೆಲೆ ದೊರೆಯಲಿದೆ ಎಂದು ರಾಮಣ್ಣ ರೈತ ಮಿತ್ರರಿಗೆ ಮಾರ್ಗದರ್ಶನ ನೀಡುತ್ತಿರುವುದನ್ನು ನೋಡಬಹುದು.



ಗುಣವಿಶ್ಲೇಷಣೆಯಿಂದ ರೈತರಿಗಾಗುವ ಲಾಭವೇನು :

ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿನ ಆನ್‌ಲೈನ್ ಟೆಂಡರ್‌ನಲ್ಲಿ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಬರುವ ಮುನ್ನಾ ರೈತರು ಕೆಲವು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕಿದೆ. ಬೆಳೆಯನ್ನು ಸಕಾಲದಲ್ಲಿ ಕಟಾವು ಮಾಡಿ, ಉತ್ಪನ್ನಕ್ಕೆ ಅನುಗುಣವಾಗಿ ಒಣಗಿಸಿ, ಸ್ವಚ್ಛ ಮಾಡಿ, ಗುಣ ಪ್ರಮಾಣಕ್ಕೆ ಅನುಗುಣವಾಗಿ ವಿಂಗಡಿಸಿ, ಉತ್ಪನ್ನಗಳನ್ನು ಸರಿಯಾಗಿ ಪ್ಯಾಕ್ ಮಾಡಿ ಮಾರುಕಟ್ಟೆಗೆ ತರುವುದು ಅತ್ಯಗತ್ಯ. ಇದರಿಂದ ಉತ್ಪನ್ನದ ಗುಣಮಟ್ಟವನ್ನು ಮಾರುಕಟ್ಟೆಯಲ್ಲಿನ ಸ್ಥಳೀಯ ಖರೀದಿದಾರರು ಪರೀಕ್ಷಿಸಲು ಅನುಕೂಲವಾಗಲಿದೆ. ಅದೇ ರೀತಿ ಹೊರ ಮಾರುಕಟ್ಟೆ ಮತ್ತು ಹೊರ ರಾಜ್ಯಗಳ ಖರೀದಿದಾರರು ಆನ್‌ಲೈನ್‌ನಲ್ಲಿ ಉತ್ಪನ್ನಗಳ ಆವಕ ಮತ್ತು ಗುಣಧರ್ಮಗಳನ್ನು ಪರಿಶೀಲಿಸಿ ಆನ್‌ಲೈನ್ ಟೆಂಡರ್‌ನಲ್ಲಿ ಭಾಗವಹಿಸುತ್ತಾರೆ. ಇದರಿಂದ ಉತ್ಪನ್ನಗಳ ಖರೀದಿಗೆ ಸ್ಪರ್ಧೆ ಏರ್ಪಟ್ಟು, ಸ್ಪರ್ಧಾತ್ಮಕ ಬೆಲೆ ದೊರೆಯಲಿದೆ.

ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಉತ್ಪನ್ನ ಗುಣ ವಿಶ್ಲೇಷಣೆ ಮಾಡಿಸಲು ರೈತರಿಗೆ ತಗಲುವ ವೆಚ್ಚವೆಷ್ಟು?

ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಉತ್ಪನ್ನಗಳ ಗುಣ ವಿಶ್ಲೇಷಣೆ ಮಾಡಿಸಲು ರೈತರು ಯಾವುದೇ ರೀತಿಯ ಶುಲ್ಕವನ್ನು ಪಾವತಿಸುವ ಅಗತ್ಯವಿಲ್ಲಾ. ಈ ಸೇವೆ ರೈತ ಬಾಂಧವರಿಗೆ ಉಚಿತವಾಗಿ ಕಲ್ಪಿಸಲಾಗಿದೆ. ಈಗಾಗಲೇ 10 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಗುಣ ವಿಶ್ಲೇಷಣೆ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಹಂತ ಹಂತವಾಗಿ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಈ ಸೇವೆಯನ್ನು ವಿಸ್ತರಿಸಲಾಗುವುದು. ಗುಣ ವಿಶ್ಲೇಷಣೆ ಮಾಡಿದ ಉತ್ಪನ್ನಗಳ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡ ಲಾಗುವುದು. ಈ ಮಾಹಿತಿಯನ್ನು ಪರಿಶೀಲಿಸಿದ ದೂರದ ಖರೀದಿದಾರರು ಆನ್‌ಲೈನ್ ಬಿಡ್ಡಿಂಗ್‌ನಲ್ಲಿ ಅಗತ್ಯ ಉತ್ಪನ್ನ ಗಳನ್ನು ಖರೀದಿಸಲು ಭಾಗವಹಿಸಲಿದ್ದಾರೆ. ಇದರಿಂದ ಈ ವ್ಯವಸ್ಥೆಯ ಖರೀದಿ ಪ್ರಕ್ರಿಯೆ ಹೆಚ್ಚುತ್ತದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಸ್ಥಾಪಿಸಲಾಗು ತ್ತಿರುವ ಏಕೀಕೃತ ಮಾರುಕಟ್ಟೆ ವೇದಿಕೆಗಳಲ್ಲಿ ರೈತರ ಅನುಕೂಲಕ್ಕಾಗಿ ಕಲ್ಪಿಸಿರುವ ಗುಣ ವಿಶ್ಲೇಷಣೆ ವ್ಯವಸ್ಥೆಯ ಲಾಭವನ್ನು ರೈತ ಬಾಂಧವರು ಪಡೆದುಕೊಳ್ಳುವುದರೊಂದಿಗೆ ರೈತರ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಮಹತ್ವಾಕಾಂಕ್ಷೆಯ ಯೋಜನೆಯ ಲಾಭ ನಿಮಗಾಗಲಿ ಎಂಬುದೇ ಇಲಾಖೆಯ ಅಪೇಕ್ಷೆ. ★

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕೃಷಿಪೇಟೆ

ಚಂದಾ ದರಗಳು

ಬಿಡಿ ಪತ್ರಿಕೆ	ರೂ.	12-00
ವಾರ್ಷಿಕ ಚಂದಾ	ರೂ.	120-00
ಆಜೀವ ಸದಸ್ಯತ್ವ	ರೂ.	1,400-00
ದಶವಾರ್ಷಿಕ ಸದಸ್ಯತ್ವ (ಸಂಘ-ಸಂಸ್ಥೆಗಳಿಗೆ)	ರೂ.	1,500-00

ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ :

ವ್ಯವಸ್ಥಾಪಕ ಸಂಪಾದಕರು,
"ಕೃಷಿಪೇಟೆ ಮಾಸಪತ್ರಿಕೆ"

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಶ್ರೀ ಆರ್.ಬಿ. ಮಾಮಲೆದೇಸಾಯಿ ಸ್ಮಾರಕ ಭವನ,
ಭೈರಿದೇವರಕೊಪ್ಪ, ಹುಬ್ಬಳ್ಳಿ-580 025.ದೂರವಾಣಿ : 2373726, 2375078
ಫ್ಯಾಕ್ಸ್ : 0836-2372751, email : ksamb@rediffmail.com